# ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ

**ಸಿ.ಸಿ. ನಂಃ 1084/2013**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹಬ್ಬಾಬ್ | ಪಿ.ಡಬ್ಲ್ಯೂ-2 |
| ತಂದೆಯ ಹೆಸರು | : | ನಬೀ ಸಾಹೆಬ್ | |
| ವಯಸ್ಸು | : | 36 ವರ್ಷ | |
| ಉದ್ಯೋಗ | : | ವಲಯ ಅರಣ್ಯ ಅಧಿಕಾರಿ, ಸಂಡೂರು ಸಾಮಾಜಿಕ ಅರಣ್ಯ ವಲಯ, ಬಳ್ಳಾರಿ ಜಿಲ್ಲೆ. | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ **20.06.2022** |
| ವಾಸಸ್ಥಳ | : | ವಿಜಯನಗರ. | ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ಹೇಳಿಕೆ. |

**ಮುಖ್ಯ ವಿಚಾರಣೆಃ ಎ.ಪಿ.ಪಿ. ರವರಿಂದಃ**

ನಾನು ನವೆಂಬರ್ 2007 ರಿಂದ 2010 ರವರೆಗೆ ಹೆಗ್ಗಡದೇವನಕೋಟೆಯ ಮೇಟಿಕುಪ್ಪೆ ವನ್ಯಜೀವಿ ವಲಯದಲ್ಲಿ ವನಪಾಲಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 29.09.2010 ರಂದು ನಾನು ಮತ್ತು ಚಾಸಾ-2 ರಿಂದ 4 ರವರು ಅರಣ್ಯದಲ್ಲಿ ಗಸ್ತು ತಿರುಗುತ್ತಿದ್ದಾಗ ದೊಡ್ಡಪಾರೆ ಅರಣ್ಯ ಪ್ರದೇಶದಲ್ಲಿ ಯಾರೋ ಮಾತನಾಡುವ ಶಬ್ದ ಕೇಳಿರುತ್ತದೆ. ನಂತರ ನಾವು ಪರಿಶೀಲನೆ ಮಾಡಿ ನೋಡಿದಾಗ 04 ಜನ ವ್ಯಕ್ತಿಗಳು ಹೆಗಲ ಮೇಲೆ ಮರದ ತುಂಡುಗಳನ್ನು ಹೊತ್ತುಕೊಂಡು ಬರುತ್ತಿದ್ದರು. ಆ ವ್ಯಕ್ತಿಗಳು ನಮ್ಮನ್ನು ನೋಡಿ ಸದರಿ ಮರದ ತುಂಡುಗಳನ್ನು ಅಲ್ಲಿಯೇ ಬಿಸಾಡಿ ಓಡಿ ಹೋಗಿರುತ್ತಾರೆ. ನಾವು ಅವರನ್ನು ಹಿಡಿಯಲು ಪ್ರಯತ್ನಿಸಿದಾಗ ಅವರು ಸಿಕ್ಕಿರುವುದಿಲ್ಲ. ನಾವು ಅವರನ್ನು ಹತ್ತಿರದಿಂದ ನೋಡಿರುವುದರಿಂದ ಅವರನ್ನು ಗುರುತಿಸಿರುತ್ತೇನೆ. ಅವರುಗಳೆಂದರೆ ರಾಜು, ಕರಿಯಪ್ಪ ಮತ್ತು

ಕಾಳ, ದಾಸ ಅಲಿಯಾಸ್ ಸಾಣಿದಾಸ ಎಂಬುವರಾಗಿರುತ್ತಾರೆ. ಇವರೆಲ್ಲರೂ ಜಿ.ಎಂ. ಹಳ್ಳಿಯ ಗಿರಿಜನ ಹಾಡಿ ನಿವಾಸಿಗಳಾಗಿರುತ್ತಾರೆ. ಸದರಿ ವ್ಯಕ್ತಿಗಳು ಬಿಸಾಡಿ ಹೋಗಿದ್ದ ಸ್ವತ್ತುಗಳನ್ನು ಪರಿಶೀಲಿಸಿ ನೋಡಿದಾಗ ಅವುಗಳು ಸಾಗುವಾನಿ ಮರದ ತುಂಡುಗಳಾಗಿರುತ್ತವೆ. ಅವುಗಳನ್ನು ಅಳತೆ ಮಾಡಿ ನೋಡಲಾಗಿ, ಒಂದು ಮರದ ತುಂಡು – 1.13 X 0.20 X 0.15 ಮೀ. ಉದ್ದ, ಅಗಲ ಮತ್ತು ದಪ್ಪ ಇದ್ದು, ಎರಡರಿಂದ ನಾಲ್ಕನೇ ತುಂಡುಗಳು ಕ್ರಮವಾಗಿ – 1.19 X 0.22 X 0.12 ಮೀ., 1.17 X 0.21 X 0.13 ಮೀ. ಮತ್ತು 1.21 X 0.22 X 0.13 ಮೀ. ಉದ್ದ, ಅಗಲ ಮತ್ತು ದಪ್ಪ ಇರುತ್ತದೆ. ನಂತರ ನಾವು ಅವುಗಳಿಗೆ ಹಳದೀ ಬಣ್ಣದ ಚಾಕಪೀಸಿನಿಂದ 1 ರಿಂದ 4 ರವರೆಗೆ ಕ್ರಮ ಸಂಖ್ಯೆ ನೀಡಿ, ಅವುಗಳಿಗೆ KNFDG52N ಎಂದು ಇಲಾಖಾ ಛಾಪಾ ಗುರುತು ಹಾಕಿರುತ್ತೇವೆ. ನಂತರ ಅವುಗಳನ್ನು ಹೆಚ್ಚಿನ ಭದ್ರತೆಗಾಗಿ ಮೇಟಿಕುಪ್ಪೆ ವಿಶ್ರಾಂತಿ ಗೃಹದ ಆವರಣಕ್ಕೆ ಸಾಗಾಟ ಮಾಡಿರುತ್ತೇವೆ. ನಾವು ವಶಪಡಿಸಿಕೊಳ್ಳುವಾಗ ಸ್ಥಳದಲ್ಲಿಯೇ ಮಹಜರ್ ತಯಾರಿಸಿರುತ್ತೇವೆ. ಸದರಿ ಮಹಜರ್ ಅನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಸದರಿ ಮಹಜರ್ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.–1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.–1(ಎ) ಎಂದು ಗುರುತಿಸಲಾಯಿತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ಮೇಲಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ. ಮಹಜರ್ ಮಾಡುವ ಸಮಯದಲ್ಲಿ ನಾವು ವಶಪಡಿಸಿಕೊಂಡ ಮರದ ತುಂಡುಗಳ ಭಾವಚಿತ್ರಗಳನ್ನು ತೆಗೆದಿರುತ್ತೇವೆ. ಸದರಿ ಭಾವಚಿತ್ರಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದರಿಂದ, ಮರದ ತುಂಡುಗಳ 06 ಭಾವಚಿತ್ರಗಳನ್ನು ನಿ.ಪಿ.–2 ರಿಂದ ನಿ.ಪಿ.–7 ಎಂದು ಮತ್ತು ನೆಗಟಿವ್ ಗಳನ್ನು ನಿ.ಪಿ.–2(ಎ) ರಿಂದ ನಿ.ಪಿ.–7(ಎ) ಎಂದು ಗುರುತಿಸಲಾಯಿತು. ನಂತರ ಪ್ರ.ವ. ವರದಿ ದಾಖಲಿಸಿ ವಲಯ ಅರಣ್ಯಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಪ್ರ.ವ. ವರದಿಯನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಪ್ರ.ವ. ವರದಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.–8 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.–

8(ಎ) ಎಂದು ಗುರುತಿಸಲಾಯಿತು. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ.

ಆರೋಪಿಗಳು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು, ಅವರ ವಿರುದ್ಧ ಸಮನ್ಸ, ವಾರೆಂಟ್, ಉದ್ಘೋಷಣೆ ಮತ್ತು ಜಪ್ತಿ ವಾರೆಂಟ್ ಹೊರಡಿಸಿದ್ದರೂ ಅವರ ಹಾಜರಾತಿಯನ್ನು ಪಡೆಯಲಾಗಿಲ್ಲ, ಆದ್ದರಿಂದ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 299ರ ಅಡಿಯಲ್ಲಿ ಈ ಮೇಲಿನಂತೆ ಸಾಕ್ಷಿಯ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**